# ಪಟ್ಟಿನತ್ತಾರ್ - 1

ಕಥೆ: ವಂದು ಮಾಮ ಚಿತ್ರ : ಪದ್ಮವಾಸನ್

1

ಕಾವೇರಿ ಪೂಂಪಟ್ಟಣದಲ್ಲಿ ಶಿವನೇಸರ್ ಎಂಬ ಆಗರ್ಭ ಶ್ರೀಮಂತ ವ್ಯಾಪಾರಿಯಿದ್ದನು. ಅವನ ಪತ್ನಿ ಜ್ಞಾನಕಲೈ ಎಂಬುವಳು. ಅವರಿಗೊಬ್ಬ ಮಗನಿದ್ದ. ಅವನ ಹೆಸರು ತಿರುವೇಂಗಡರ್. ಅವನಿಗೆ ಒಬ್ಬಳು ಅಕ್ಕನೂ ಇದ್ದಳು.

2

ಮಗೂ, ಶಿವನನ್ನು ಭಕ್ತಿಯಿಂದ ಪ್ರಾರ್ಥಿಸು.



3

ತಿರುವೇಂಗಡರ್ ತುಂಬ ಬುದ್ಧಿವಂತ. ಅವನು ಚೆನ್ನಾಗಿ ಕಲಿತು ದೊಡ್ಡ ವಿದ್ವಾಂಸನೂ ಆದ, ಭಕ್ತನೂ ಆದ. ವ್ಯಾಪಾರದಲ್ಲೂ ಅವನು ಯಶಸ್ಸು ಗಳಿಸಿದ. ದಾನ, ಧರ್ಮಗಳಿಗೆ ಹೇರಳ ಸಂಪತ್ತನ್ನು ಖರ್ಚುಮಾಡಿದ.



4

ತಿರುವೇಂಗಡರ್ ವಯಸ್ಸಿಗೆ ಬಂದಾಗ ಶಿವಕಲೈ ಎಂಬುವಳನ್ನು ವಿವಾಹವಾದ. ಶಿವಚಿದಂಬರಂ ಮತ್ತು ಶಿವಕಾಮಿ ಎಂಬ ದಂಪತಿಗಳ ಮಗಳೇ ಶಿವಕಲೈ.

5

ತಿರುವೇಂಗಡರ್ ತನ್ನ ಪತ್ನಿಯೊಂದಿಗೆ ಹಲವು ಪುಣ್ಯ ಕ್ಷೇತ್ರಗಳಿಗೆ ಯಾತ್ರೆ ಹೋದ........

ದೇವರೇ, ನಮಗೆ ಒಂದು ಮಗುವನ್ನು ಕರುಣಿಸು.



6

ತಿರುವಿಡೈ ಮರುದೂರ್ ಎಂಬಲ್ಲಿ ಶಿವಶರ್ಮ ಎಂಬ ಶಿವಭಕ್ತನಿದ್ದ. ಅವನ ಪತ್ನಿ ಸುಶೀಲಾ. ಅವರು ತಮ್ಮ ಸಂಪತ್ತನ್ನೆಲ್ಲ ಭಕ್ತರ ಸೇವೆಗಾಗಿ ವಿನಿಯೋಗಿಸಿ, ಅದರಿಂದಾಗಿ ಬಡವರಾಗಿಬಿಟ್ಟಿದ್ದರು.

ಸುಶೀಲಾ, ಭಕ್ತರ ಸೇವೆಗಾಗಿ ಬಳಸಲು ನಮ್ಮ ಬಳಿ ಹಣವಿಲ್ಲ. ಏನು ಮಾಡಲಿ?




7
ಗಂಡು ಮಗು ಎಷ್ಟು ಸುಂದರವಾಗಿದೆ!
ತಿರುವೇಂಗಡರ್‌ಗೆ ಮಕ್ಕಳಿಲ್ಲ. ಅವನಿಗೋ ಮಕ್ಕಳಾಗಬೇಕೆಂದು ತುಂಬಾ ಬಯಕೆ. ಈ ಮಗುವನ್ನು ನಾವು ಅವನಿಗೆ ಕೊಟ್ಟುಬಿಡೋಣ. ಅದಕ್ಕೆ ಬದಲಾಗಿ ಅವನು ಈ ಮಗುವಿನ ತೂಕದಷ್ಟು ಚಿನ್ನವನ್ನು ಕೊಡಲಿ. ಅದರಿಂದ ನಾವು ಭಕ್ತರ ಸೇವೆ ಮಾಡಬಹುದು.


8
ತಿರುವೇಂಗಡರ್ ಸಂತೋಷದಿಂದ ಮಗುವನ್ನು ಸ್ವೀಕರಿಸಿದ. ಶಿವಶರ್ಮನಿಗೆ ಅದರ ತೂಕದಷ್ಟು ಚಿನ್ನವನ್ನು ನೀಡಿದ.
ಶಿವಕಲ್ಯೆ! ಈ ಮಗು ಬಿಲ್ವವೃಕ್ಷದ ಅಡಿಯಲ್ಲಿ ಸಿಕ್ಕಿತಲ್ಲವೆ? ಶಿವನೇ ನಮಗಾಗಿ ಅದನ್ನು ಅಲ್ಲಿ ಇಟ್ಟಿರಬೇಕು. ನಾವು ಮಗುವಿಗೆ ಮರುಧವನನ್ ಎಂದು ಹೆಸರಿಡೋಣ.


9
ಮರುಧವನನ್ ಸುಂದರ ಯುವಕನಾಗಿ ಬೆಳೆದು ನಿಂತ. ಚೆನ್ನಾಗಿ ವಿದ್ಯಾಭ್ಯಾಸ ಮಾಡಿದ. ತಂದೆಯ ವ್ಯಾಪಾರದಲ್ಲೂ ಸಹಾಯ ಮಾಡಿದ..
ಅಪ್ಪಾ, ನಾನು ಕೂಡ ವಿದೇಶಗಳಿಗೆ ಹಡಗಿನಲ್ಲಿ ಹೋಗಿ ವ್ಯಾಪಾರ ಮಾಡುತ್ತೇನೆ.
ಮಗೂ, ನೀನಿಲ್ಲದೆ ನಾನು ಬದುಕಿರಲಾರೆ. ನಿನ್ನನ್ನು ವಿದೇಶಕ್ಕೆ ಕಳುಹಿಸಿ ಕೊಡಲಾರೆ.


10
ಕೊನೆಗೂ ಮಗನ ಒತ್ತಾಯಕ್ಕೆ ತಂದೆ ಮಣಿಯಲೇಬೇಕಾಯಿತು.
ಮರುಧವನ, ಯಶಸ್ಸು ಗಳಿಸಿ ಹಿಂದಿರುಗು. ಅಲ್ಲಿ ಒಳ್ಳೆಯ ವಸ್ತುಗಳನ್ನು ಖರೀದಿಸಿ, ತೆಗೆದುಕೊಂಡು ಬಾ.


11
ಮರುಧವನನು ವ್ಯಾಪಾರ ಮಾಡಿ ಸಾಕಷ್ಟು ಸಂಪತ್ತನ್ನು ಗಳಿಸಿದ. ಆದರೆ ಆಶ್ಚರ್ಯವೆಂಬಂತೆ, ಅವನು ಹೇರಳವಾಗಿ ಬೆರಣಿ ಹಾಗೂ ಇತರ ಇಂಧನಗಳನ್ನು ಖರೀದಿಸಿ ತನ್ನ ಹಡಗಿನಲ್ಲಿ ತುಂಬಿದ.
ಏನು? ತಿರುವೇಂಗಡರ್‌ನ ಮಗ ಈ ರೀತಿ ಮಾಡಿದನೆ ? ಬರೀ ಬೆರಣಿಯನ್ನು ಹಡಗಿನಲ್ಲಿ ತುಂಬಿಸುವುದಕ್ಕಾಗಿ ಅವನು ಇಲ್ಲಿಯವರೆಗೆ ಬಂದನೆ ? ಎಂಥ ನಾಚಿಕೆಗೇಡು!
ಈತನ ತಲೆ ಕೆಟ್ಟಿದೆ! ಪಾಪ, ತಿರುವೇಂಗಡರ್!
12
ಹಡಗುಗಳು ಕಾವೇರಿ ಪೂಂಪಟ್ಟಣಂ ತಲುಪಿದವು.
ಓ! ತಿರುವೇಂಗಡರ್! ನಿನ್ನ ಮಗ ಎಂಥ ಅಮೂಲ್ಯ ವಸ್ತುಗಳನ್ನು ತಂದಿದ್ದಾನೆ, ನೋಡು.... ಹ ಹ್ಹಾ, ಹ್ಹಾ....
ನೀವೇಕೆ ನಗುತ್ತಿದ್ದೀರಿ? ನೀವು ನಗುವಂತಹ ಕಾರ್ಯವನ್ನು ಅವನೇನು ಮಾಡಿದ್ದಾನೆ?
ಇನ್ನೇನು ಮಾಡಿದ? ಬೇಕಾದಷ್ಟು ಬೆರಣಿ, ಬೇರೆ ಇಂಧನಗಳನ್ನು ತಂದಿದ್ದಾನೆ. ಹ ಹ್ಹ ಹ್ಹಾ .....
13
ಮರುಧವನ, ಇದೇನು ಕೇಳುತ್ತಿದ್ದೇನೆ ನಾನು? ಇದು ನಿಜವೆ ?
ಹೌದಪ್ಪಾ...
ಏನಾಯಿತು ನಿನಗೆ? ತಲೆ ಕೆಟ್ಟಿದೆಯೆ? ನೀನು ಅಷ್ಟು ದೂರ ಹೋದದ್ದು ಕೆಲಸಕ್ಕೆ ಬಾರದ ಬೆರಣಿ ಖರೀದಿಸುವುದಕ್ಕಾಗಿಯೆ? ಎಂಥ ಅಪಮಾನ ! ನನ್ನ ಮುಂದೆ ನಿಲ್ಲಬೇಡ, ಹೊರಡು!


14
ತಿರುವೇಂಗಡರ್‌ಗೆ ಸಹಿಸಲಾಗಲಿಲ್ಲ. ಕೋಪದಿಂದ ಅವನು ಬೆರಣಿಗಳನ್ನೆಲ್ಲ ತುಂಬಿದ್ದ ಸ್ಥಳಕ್ಕೆ ಹೋದ.
ಓ! ನನಗೊಬ್ಬ ಮಗನಿದ್ದಾನೆ, ಎಂಥ ಮೂರ್ಖ ಅವನು! ಬರೀ ಬೆರಣಿಯ ರಾಶಿ! ಅರೆ... ಇದೇನಿದು? ಮುತ್ತು, ರತ್ನ, ಚಿನ್ನ ವಜ್ರ - ಬೆರಣಿಯ ಒಳಗೆಲ್ಲ ಆಭರಣಗಳು! ನಾನೆಂಥ ತಪ್ಪು ಮಾಡಿದೆ!
15
ಆಶ್ಚರ್ಯ ಚಕಿತನಾದ ತಿರುವೇಂಗಡರ್ ಮರುಧವನನ್ನು ನೋಡಬೇಕೆಂದು ಮನೆಗೆ ಧಾವಿಸಿದ.
ಮಗ ಮರುಧವನನೆಲ್ಲಿ? ನಾನೆಂಥ ಮೂರ್ಖ! ಪೆದ್ದ ನಾನು. ನಿನ್ನ ಮಹತ್ಕಾರ್ಯ ಅರ್ಥವಾಗದೆ ನಿನ್ನನ್ನು ನಾನು ಬೈದೆ. ಶಿವಕಲೈ, ಮಗನೆಲ್ಲಿ?
ನಿಮಗೆ ಈ ಪೆಟ್ಟಿಗೆಯನ್ನು ಕೊಟ್ಟು, ಅವನು ಹೊರಟುಹೋದ.
16
ಪೆಟ್ಟಿಗೆಯೊಳಗೆ ಒಂದು ಸಣ್ಣ ತಾಳೆಯ ಗರಿಯಿತ್ತು. ಅದರಲ್ಲಿ ಬರೆದಿತ್ತು ....
''ಸಾವಿನ ಬಳಿಕ ನೀ ಹೋಗುವ ನಾಡಿಗೆ ಬೇರೆ ಸಹಯಾತ್ರಿಕ ಒಬ್ಬನೂ ಸಿಗಲಾರ....''
ನಿಜ. ಎಂಥ ಸತ್ಯವಾದ ಮಾತು! ನಾನು ಸಾಯುವಾಗ ಒಂದು ಸಣ್ಣ ಸೂಜಿಯನ್ನೂ ಕೊಂಡೊಯ್ಯಲಾರೆ.
17
ನನ್ನ ಕಣ್ಣು ತೆರೆಯಿತು. ಮಗನೇ, ನೀನು ನನ್ನಲ್ಲಿ ಅರಿವಿನ ಬೆಳಕನ್ನು ಹತ್ತಿಸಿದೆ. ನಾನು ಈಗಲೇ ಸಂಸಾರವನ್ನು ತ್ಯಜಿಸುತ್ತೇನೆ.
ಹೀಗೆ ಪ್ರಪಂಚತ್ಯಾಗ ಮಾಡಿದ ತಿರುವೇಂಗಡರ್. ಜನರು ಅವನನ್ನು 'ಪಟ್ಟಿನತ್ತಾರ್' ಎಂದು ಕರೆದರು.